# ಕಲಿಕಾ ಖಾತರಿ ಕಾರ್ಯಕ್ರಮದಿಂದ ಕಲಿತ ವಿಷಯಗಳು

ರಿಷಿಕೇಶ್ ಬಿ. ಎಸ್.



ಕಲಿಕಾ ಖಾತರಿ ಕಾರ್ಯಕ್ರಮ (ಎಲ್.ಜಿ.ಪಿ.) ಅಜೀಂ ಪ್ರೇಂಜಿ ಪ್ರತಿಷ್ಠಾನವು 2003 ರಿಂದ 2008ರ ಅವಧಿಯಲ್ಲಿ ಪರಿಕಲ್ಪಿಸಿ ಐದು ರಾಜ್ಯಗಳಲ್ಲಿ ಜಾರಿಗೆ ತಂದ ವಿಶಾಲ ಪರಿಧಿಯ ವಿದ್ಯಾರ್ಥಿಗಳ ಕಲಿಕಾನಿರ್ಧರಣೆಯ ಕಾರ್ಯಕ್ರಮ. ಇಲ್ಲಿ ವಿಶಾಲ ವ್ಯಾಪ್ತಿಯ ಚಿತ್ರವನ್ನು ಪಡೆಯುವುದಕ್ಕೆ ಮಾತ್ರವೇ ಅಧ್ಯಯನವು ಸೀಮಿತವಾಗಿರದ ಕಾರಣ, ಐದು ವರ್ಷಗಳ ಅವಧಿಯಲ್ಲಿ ದೇಶದಾದ್ಯಂತ ಜಾರಿಯಾದ ಈ ಕಾರ್ಯಕ್ರಮವು ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಸಂಗತಿಗಳ ದೊಡ್ಡ ಚಿತ್ರವನ್ನು ನೀಡಿದ್ದಷ್ಟೇ ಅಲ್ಲ ಅಮೂಲ್ಯ ಒಳನೋಟಗಳನ್ನೂ ನೀಡಿತು. ವಿಶಾಲ ಪರಿಧಿಯ ಕಲಿಕಾನಿರ್ಧರಣೆ ಕೊಡಬಹುದೆಂದು ನಿರೀಕ್ಷಿಸಬಹುದಾದ ಮಾಹಿತಿಗಳಿಗಿಂತ ಆಳವಾದ ವಿಚಾರಗಳನ್ನು ಅರಿಯುವುದಕ್ಕೆ ಸಾಧ್ಯವಾಯಿತು. ವಿಶಾಲ ಪರಿಧಿಯ ಕಲಿಕಾ ನಿರ್ಧರಣೆಗಳ ಬಗ್ಗೆ ಟೀಕೆಗಳು ಅನೇಕ. ಇವು ಸಮಗ್ರ ಪರೀಕ್ಷೆಯಾದ ಕಾರಣ ಇವನ್ನು ಸಾರಾಸಗಟಾಗಿ ಕೈ ಬಿಡಬೇಕು ಎನ್ನುವುದರಿಂದ ಹಿಡಿದು ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸುವುದಕ್ಕೆ ಇದರಿಂದ ಏನೂ ಪ್ರಯೋಜನವಿಲ್ಲ ಎನ್ನುವವರೆಗೆ ಟೀಕೆಗಳಿವೆ. ಸ್ವಾರಸ್ಯಕರ ವಿಷಯವೆಂದರೆ ಕಲಿಕಾ ನಿರ್ಧರಣೆ ವಿನ್ಯಾಸದಲ್ಲಿ ಕೆಲವು ನವೀನ ಅಂಶಗಳು ಮತ್ತು ಸಂಶೋಧನೆಯನ್ನು ಅಳವಡಿಸಿಕೊಳ್ಳುವ ಮೂಲಕ ಕಲಿಕಾ ಖಾತರಿ ಕಾರ್ಯಕ್ರಮವು ವಿಶಾಲ ಪರಿಧಿಯ ಕಲಿಕಾ ನಿರ್ಧರಣೆಗಳ ಈ ಕೊರತೆಗಳನ್ನು ತಪ್ಪಿಸಿದ್ದಲ್ಲದೆ, ಸಾಂಪ್ರದಾಯಿಕವಾಗಿ ಇಂಥ ಕಲಿಕಾ ನಿರ್ಧರಣೆಯಿಂದ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನದ್ದನ್ನು ನೀಡಿತು.

ಕಲಿಕಾ ಖಾತರಿ ಕಾರ್ಯಕ್ರಮವು ಮುಖ್ಯವಾಗಿ ನಿರೀಕ್ಷಿತ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಮೈಗೂಡಿಸುವುದನ್ನು ಯಶಸ್ವಿಯಾಗಿ ಸಾಧಿಸಿದ ಶಾಲೆಗಳನ್ನು ಗುರುತಿಸಿ, ಪ್ರಶಂಸಿಸುವ ಮುಖ್ಯ ಗುರಿಯನ್ನಿಟ್ಟುಕೊಂಡಿತ್ತು. ಈ ಪರಿಕಲ್ಪನೆ ಜೊತೆಗೆ ಎರಡು ಮುಖ್ಯ ಅಂಶಗಳನ್ನೂ ಅಳವಡಿಸಿಕೊಂಡಿತ್ತು. ಅವೆಂದರೆ, ಸಮಗ್ರ ಕಲಿಕಾ ನಿರ್ಧರಣೆಯಿಂದ ದೊರೆತ ಮಾಹಿತಿಯನ್ನು

**ಎ**. ರೂಪಣ (Formative) ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು (ಅಂದರೆ ಪಾಠ ಹೇಳಿಕೊಡುವ ವಿಧಾನಗಳನ್ನು ಮತ್ತು ತರಗತಿಯಲ್ಲಿ ಕೊಳ್ಕೊಡೆಗಳನ್ನು ಮತ್ತು ಚಟುವಟಿಕೆಗಳನ್ನು ಸುಧಾರಿಸುವುದಕ್ಕೆ)

**ಬಿ**. ಶಿಕ್ಷಕರಿಗೆ ಹಿಮ್ಮಾಹಿತಿಗಳನ್ನು ಕೊಡುವುದಷ್ಟೇ ಅಲ್ಲ ಜೊತೆಗೆ ಶಿಕ್ಷಕರು ಮುಂದೇನು ಮಾಡಬಹುದು ಎಂಬುದನ್ನು ತಿಳಿಸಿಕೊಡುವುದು.

ಕಲಿಕಾ ಖಾತರಿ ಕಾರ್ಯಕ್ರಮದ ಕಲಿಕೆಯ ನಿರ್ಣಯವು ಒಂದು ಸಮಗ್ರ ನಿರ್ಣಯವಾಗಿದ್ದರೂ ಕಲಿಕೆಯ ನಿರ್ಣಯ ಮಾಡುವುದಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಏಕೆಂದರೆ ಈ ವಿಧಾನದಿಂದ ದೊರೆತ ಹಿಮ್ಮಾಹಿತಿಯು ಒಂದೊಂದು ಶಾಲಾಮಟ್ಟದಲ್ಲೂ ಹಾಗೂ ಇಡೀ ಶಿಕ್ಷಣ ವ್ಯವಸ್ಥೆಯಲ್ಲೂ ತರಗತಿಯ ಬೋಧನೆಯಲ್ಲಿ ಸುಧಾರಣೆ ತರುವುದಕ್ಕೆ ಮಹತ್ವದ ಸಂಪರ್ಕವನ್ನು ಒದಗಿಸುತ್ತದೆ.

ನಿದರ್ಶನಪೂರ್ವಕವಾಗಿ ಹೇಳುವುದಾದರೆ, ನಾವು ವರ್ಷಾಂತ್ಯದಲ್ಲಿ ಮೂರನೇ ತರಗತಿ ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಿದ್ದರೆ, ಫಲಿತಾಂಶವು ಮೂರನೆಯ ತರಗತಿ ಶಿಕ್ಷಕರಿಗೆ ಹಿಮ್ಮಾಹಿತಿಯನ್ನು ನೀಡುವುದೇ ಅಲ್ಲದೆ ನಾಲ್ಕನೆಯ ತರಗತಿಗೆ ಬೋಧಿಸುವ ಶಿಕ್ಷಕರಿಗೆ ತನ್ನ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಚಿತ್ರಣವನ್ನು ನೀಡುತ್ತದೆ. ಶಿಕ್ಷಕರಿಗೆ ಮುಂದೇನು ಮಾಡಬೇಕು ಎಂಬುದನ್ನು ಅಥವಾ ಮುಮ್ಮಾಹಿತಿಯನ್ನು ನೀಡುವುದರ ಹಿಂದಿನ ಉದ್ದೇಶವಿಷ್ಟೆ, ಸಾಮರ್ಥ್ಯವೆಂಬುದು ಸತತವಾಗಿ ಇರಬೇಕಾದದ್ದು ಎಂಬುದನ್ನು ಮನವರಿಕೆ ಮಾಡಿಸುವುದು ಮತ್ತು ವಿದ್ಯಾರ್ಥಿಗಳು ನಿರ್ದಿಷ್ಟ ಸಾಮರ್ಥ್ಯ ಗಳಿಕೆಯಲ್ಲಿ ಎದುರಿಸುವ ಸಮಸ್ಯೆಯ ಒಳನೋಟವನ್ನು ಅರಿಯಲು ಸಾಧ್ಯವಾಗಿಸುವುದು.

ಮುಮ್ಮಾಹಿತಿಗಳನ್ನು ಶಿಕ್ಷಕರಿಗೆ ನೀಡುವ ಸಣ್ಣ ಅಂಶವನ್ನು ಕಲಿಕಾನಿರ್ಧರಣೆಯಲ್ಲಿ ಸೇರಿಸುವ ಮೂಲಕ ಆದ ಬದಲಾವಣೆಯೇನೆಂದರೆ ಇದರಿಂದ ವರ್ಷಾಂತ್ಯದಲ್ಲಿ ನಡೆಸುವ ಪರೀಕ್ಷೆಯಿಂದ ಮತ್ತು ರ್‍ಯಾಂಕ್ ನೀಡಿಕೆಯಿಂದ ಶಿಕ್ಷಕರಿಗೇನೂ ಪ್ರಯೋಜನ ಇಲ್ಲ, ಏಕೆಂದರೆ ಸಂಬಂಧಪಟ್ಟ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಹೊರಟು ಹೋಗುತ್ತಾರೆ ಹೀಗಾಗಿ ಸಮಗ್ರ ಕಲಿಕಾ ನಿರ್ಧರಣೆ ವ್ಯರ್ಥವೆಂಬ ಟೀಕೆಯನ್ನು ಪರಿಹರಿಸಲು ಸಾಧ್ಯವಾಯಿತು.

ಕಾರ್ಯಕ್ರಮದಲ್ಲಿ ಈ ಸಮಸ್ಯೆಯ ಪರಿಹಾರಕ್ಕಾಗಿ ಇನ್ನೊಂದು ಮಾರ್ಗವನ್ನೂ ಅನುಸರಿಸಲಾಯಿತು. ವರ್ಷದ ಯಾವ ಸಮಯದಲ್ಲಿ ಶಾಲೆಯಲ್ಲಿ ಪರೀಕ್ಷೆಯನ್ನು ನಡೆಸಬಹುದು ಎಂಬುದನ್ನು ಸ್ವಯಂ ಪ್ರೇರಿತವಾಗಿ ಗುರುತಿಸಿ ತಿಳಿಸಬಹುದಾದ ಅವಕಾಶವನ್ನು ಶಾಲೆಗಳಿಗೆ ಒದಗಿಸಲಾಯಿತು. ಇದರಿಂದಾಗಿ ಎದುರಾಗಬಹುದಾದ ಯಾವುದೇ ಸಮಸ್ಯೆಯನ್ನು ಹೇಗೆ ಎದುರಿಸಬಹುದು ಎಂಬುದನ್ನು ತಿಳಿಸಲಾಯಿತು. ಪ್ರಸ್ತುತ ವರ್ಷದ ಸಾಮರ್ಥ್ಯದ ಬದಲು ಹಿಂದಿನ ವರ್ಷದ ಅಂಶಗಳ ಪರೀಕ್ಷೆ ಇರುವಂತೆ ಕಲಿಕಾನಿರ್ಧರಣೆಯನ್ನು ವಿನ್ಯಾಸ ಮಾಡಲಾಯಿತು. ಅಂದರೆ ನಾಲ್ಕನೆಯ ತರಗತಿಯ ವಿದ್ಯಾರ್ಥಿಯ ಕಲಿಕಾನಿರ್ಧರಣೆ ಮಾಡುವಾಗ ಆತನಿಗೆ ಕೇಳುವ ಪ್ರಶ್ನೆಗಳು ಮೂರನೆಯ ತರಗತಿಯ ಸಾಮರ್ಥ್ಯವನ್ನು ಒರೆಗೆ ಹಚ್ಚುವಂತವು. ಯಾವುದೇ ನಿರ್ದಿಷ್ಟವಾದ ಪಠ್ಯಪುಸ್ತಕವನ್ನು ಆಧರಿಸದೆ ಅದರ ಬದಲಾಗಿ, ಸಾಮರ್ಥ್ಯವನ್ನು ಆಧರಿಸಿದ ಪರೀಕ್ಷಾ ಮಾದರಿಗಳನ್ನು ಸಿದ್ಧಪಡಿಸಿದ್ದ ಕಾರಣದಿಂದ ಇದು ಯಾವುದೆ ಪೂರ್ವಗ್ರಹಕ್ಕೆ ಎಡೆ ನೀಡಲಿಲ್ಲ ಮತ್ತು ಪರೀಕ್ಷೆಗೋಸ್ಕರವೇ ಪಾಠಮಾಡುವುದು ವಿಶಾಲ ಪರಿಧಿಯ ಕಲಿಕಾನಿರ್ಧರಣೆಯ ಗುಣ ಎನ್ನುವ ಮತ್ತೊಂದು ಟೀಕೆಯನ್ನು ಪರಿಹರಿಸುವುದು ಸಾಧ್ಯವಾಯಿತು. ಕಲಿಕಾ ಖಾತರಿ ಕಾರ್ಯಕ್ರಮದ ಅನುಭವದಿಂದ ತಿಳಿದುಬಂದ ಅಂಶವೆಂದರೆ ಎಲ್ಲೆಡೆ ಮೂಲಭೂತ ಸೌಕರ್ಯಗಳ ಕೊರತೆ ಹಾಗು ಅಗತ್ಯ ಶಿಕ್ಷಕರ ಸಂಖ್ಯೆ ಇಲ್ಲದಿರುವುದು,

ಶಾಲೆಗಳಲ್ಲಿ ಶುಚಿತ್ವ ಕಾಪಾಡುವ ಮೂಲಭೂತ ಸೌಕರ್ಯಗಳು ಇಲ್ಲದಿರುವಾಗಲೂ ವಿದ್ಯಾರ್ಥಿಗಳ ಕಲಿಕೆ ಉತ್ತಮಗೊಳಿಸಲು ಶ್ರಮಿಸಿದ ಕೆಲವು ಶಾಲೆಗಳಿವೆ ಎಂಬುದೂ ಗಮನಕ್ಕೆ ಬಂತು.

ಒಂದೇ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ್ಯೂ ಶಾಲೆ-ಶಾಲೆಗಳ ನಡುವೆ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳು ಏಕೆ ಭಿನ್ನವಾಗಿವೆ (ಈ ಶಾಲೆಗಳು ಉತ್ತಮ ಪ್ರದರ್ಶನ ನೀಡಲು ಕಾರಣವಾದ ಅಂಶಗಳು ಮತ್ತು ಕ್ರಮಗಳನ್ನು ದಾಖಲಿಸುತ್ತಾ) ಅವುಗಳ ನಡುವಿನ ವ್ಯತ್ಯಾಸಗಳ ಹಿಂದಿರುವ ಕಾರಣವನ್ನು ಅರಿಯುವುದು ಈ ಕಲಿಕಾನಿರ್ಧರಣೆ ಕಾರ್ಯಕ್ರಮದ ಅನುಪಾಲನಾ ಚಟುವಟಿಕೆಯಾಯಿತು.

ಹೀಗೆ ಕಲಿಕಾ ಖಾತರಿ ಕಾರ್ಯಕ್ರಮವು ಕೇವಲ ದೊಡ್ಡ ಪ್ರಮಾಣದ ಕಲಿಕಾ ನಿರ್ಧರಣೆಗಳ ಕಾರ್ಯಕ್ರಮ ಮಾತ್ರವಾಗಿರದೇ ಸಣ್ಣ ಹಾಗೂ ದೊಡ್ಡ ಪ್ರಮಾಣದ ಸಂಶೋಧನೆಗಳನ್ನು ಹೊಂದಿದ್ದು, ಅನೇಕ ವಿಷಯಗಳನ್ನು ಕಲಿಯುವುದು ಸಾಧ್ಯವಾಯಿತು.

"ಒಂದು ಶಾಲೆಯ ಉತ್ತಮ ಸಾಧನೆಯ ಹಿಂದೆ ಅನೇಕ ಸಾಮಾಜಿಕ, ಆರ್ಥಿಕ ಮೂಲ ಸೌಕರ್ಯಗಳು ಮತ್ತು ಶಾಲೆಯ ಶಿಕ್ಷಣದ ಗುಣಮಟ್ಟದ ವಿಷಯಗಳು ಕೆಲಸಮಾಡುತ್ತವೆ. ಕೆಲವರ ಪ್ರಕಾರ ಸಾಮಾಜಿಕ ಆರ್ಥಿಕ ಅಂಶಗಳಾದ ಜಾತಿ, ಕುಟುಂಬದ ಆದಾಯ, ಉದ್ಯೋಗ, ತಂದೆತಾಯಿಯರ ಶಿಕ್ಷಣದ ಮಟ್ಟ ಮುಂತಾದವು ಮಕ್ಕಳು ಶಾಲೆಯನ್ನು ಮಧ್ಯದಲ್ಲೇ ಬಿಟ್ಟುಬಿಡುವುದಕ್ಕೆ ಮತ್ತು ಕಲಿಯುವುದರಲ್ಲೂ ಮಕ್ಕಳು ಹಿಂದುಳಿಯುವುದಕ್ಕೆ ಕಾರಣವಾಗಿರುತ್ತವೆ ಎಂದು ಹೇಳುತ್ತವೆ. ಇನ್ನು ಕೆಲವರ ಪ್ರಕಾರ ಶಾಲೆಗಳು ತಮ್ಮ ಸಾಮಾಜಿಕ-ಆರ್ಥಿಕ ಸಮಸ್ಯೆಗಳೇನೇ ಇರಲಿ ತಮ್ಮ ಶಾಲೆಯಲ್ಲಿನ ಬೋಧನೆಯ ಕಳಪೆ ಗುಣಮಟ್ಟದ ಕಾರಣದಿಂದ ಮಕ್ಕಳು ಶಾಲೆಯನ್ನು ಮಧ್ಯದಲ್ಲೇ ಬಿಟ್ಟುಬಿಡುತ್ತಿದ್ದಾರೆ (ಮತ್ತು ಕಲಿಯುವುದರಲ್ಲೂ ಮಕ್ಕಳು ಹಿಂದುಳಿಯುತ್ತಿದ್ದಾರೆ).

ಆದ್ದರಿಂದ ಒಂದು ಶಾಲೆಯ ಯಶಸ್ಸು ಅಥವಾ ಸೋಲು ಎರಡು ಮುಖ್ಯ ಅಂಶಗಳನ್ನು ಅವಲಂಬಿಸಿರುತ್ತದೆ-ಒಂದೆಡೆ ಸಾಮಾಜಿಕ-ಆರ್ಥಿಕ, ಜನಸಂಖ್ಯೆ ಮತ್ತು ಪರಿಸರದ ಅಂಶಗಳು ಮತ್ತು ಇನ್ನೊಂದೆಡೆ ಶಾಲೆಯಲ್ಲಿ ಪಾಠಮಾಡುವ ರೀತಿ. ಕಲಿಕಾ ಖಾತರಿ ಕಾರ್ಯಕ್ರಮದಲ್ಲಿ ಗುರುತಿಸಿದ ಅಂಶಗಳನ್ನು ಆಧರಿಸಿ ನಡೆಸಿದ ಸಂಶೋಧನೆಗಳು, ಕೆಲವು ಸಾಮಾನ್ಯ ಗ್ರಹಿಕೆಗಳನ್ನು ತಿರಸ್ಕರಿಸುತ್ತವೆ ಮತ್ತು ಕೆಲವನ್ನು ಅಗತ್ಯವೆಂದು ಒತ್ತಿ ಹೇಳುತ್ತವೆ. ಮೂಲಸೌಕರ್ಯಗಳು ಮತ್ತು ಶಿಕ್ಷಕರ ಅನುಭವ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಹತ್ವದ ಸಂಗತಿಗಳಲ್ಲ ಎಂದು ಸಂಶೋಧನೆಗಳು ಹೇಳುತ್ತವೆ. ಅವು ಗುರಿ ಸಾಧನೆಯಲ್ಲಿ ಮುಖ್ಯಪಾತ್ರವನ್ನು ವಹಿಸುವುದಿಲ್ಲ, ಬದಲಿಗೆ ಅಪೇಕ್ಷಣೀಯ ಅಂಶಗಳಾಗಿರುತ್ತವೆ ಎಂದು ಗುರುತಿಸಲಾಗಿದೆ.

ಉತ್ತಮ ಫಲಿತಾಂಶ ಬರುವ ಮತ್ತು ಬಾರದೆ ಇರುವ ಶಾಲೆಗಳ ನಡುವೆ ಇರುವ ಮುಖ್ಯ ವ್ಯತ್ಯಾಸಗಳೆಂದರೆ ಶಾಲಾ ನಿರ್ವಹಣೆ ಮತ್ತು ಪಾಠ ಹೇಳಿಕೊಡುವ ರೀತಿ. ಉತ್ತಮ ಫಲಿತಾಂಶ ಬರುವ ಶಾಲೆಗಳಲ್ಲಿ ಹೆಚ್ಚಿನ ಪ್ರಮಾಣದ ಶಿಸ್ತು, ಬದ್ಧತೆ ಮತ್ತು ಶಿಕ್ಷಕರ ಪಾಲ್ಗೊಳ್ಳುವಿಕೆ ಇರುತ್ತದೆ. ಇದು ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಹಾಜರಿ,

ದಾಖಲೆಗಳ ಉತ್ತಮ ನಿರ್ವಹಣೆ, ಶಾಲೆಗಳಲ್ಲಿ ಗುಣಮಟ್ಟದ ಬೋಧನಾ ಸಲಕರಣೆಗಳು, ಶಾಲೆಯಲ್ಲಿ ಸ್ವಚ್ಛತೆ, ಉತ್ತಮ ಹೊರನೋಟ ಇರುವುದನ್ನು ಸ್ಪಷ್ಟಪಡಿಸುತ್ತದೆ. ಇಂಥ ಶಾಲೆಗಳಲ್ಲಿರುವ ಶಿಕ್ಷಕರು ಹೆಚ್ಚಿನ ಕಾಲವನ್ನು (ಕೆಲವೊಮ್ಮೆ ರಜಾ ದಿನಗಳಲ್ಲೂ) ಮಕ್ಕಳೊಂದಿಗೆ ಕಳೆದು, ಅಭ್ಯಾಸ ಮಾಡುವಂತೆ ಪ್ರೋತ್ಸಾಹಿಸುತ್ತಾರೆ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ ಹೆಚ್ಚಿನ ಕಾಳಜಿಯೊಂದಿಗೆ ಪರಿಹಾರಾತ್ಮಕ ಶಿಕ್ಷಣ ಇತ್ಯಾದಿಗಳನ್ನು ನೀಡುತ್ತಾರೆ.

ಅತ್ಯಂತ ನಿರ್ಣಾಯಕ ಅಂಶವೆಂದರೆ, ಬದ್ಧತೆ, ಶಿಸ್ತು ಮತ್ತು ಮುಖ್ಯ ಶಿಕ್ಷಕರ ಶ್ರಮ-ಪ್ರಯತ್ನಗಳನ್ನು ಒಳಗೊಂಡ 'ಸಮರ್ಥ ಶಿಕ್ಷಕರ ವ್ಯವಸ್ಥೆ' ಒಂದೆಡೆ ಮತ್ತು ಸಕ್ರಿಯ, ಬೆಂಬಲಿಸುವ ಶಾಲಾಭಿವೃದ್ಧಿ ಸಮಿತಿ ಮತ್ತು ಪೋಷಕರನ್ನು ಒಳಗೊಂಡ ಸಮುದಾಯದ ಪಾಲ್ಗೊಳ್ಳುವ ವ್ಯವಸ್ಥೆ ಇನ್ನೊಂದುಕಡೆ. ವಿದ್ಯೇತರ ಗಣನಾಂಶಗಳಿಂದ, ವಿದ್ಯಾಗಣನಾಂಶಗಳತ್ತ ಹೊರಳಿದಾಗ[2], ಕಲಿಕಾ ಖಾತರಿ ಕಾರ್ಯಕ್ರಮ ಕೊಟ್ಟ ಒಳನೋಟಗಳು, ವಿಶಾಲ ಪರಿಧಿಯ ಕಲಿಕಾನಿರ್ಧರಣೆಯಿಂದ ನಿರೀಕ್ಷಿಸಲಾಗದ್ದು. ವಿವಿಧ ರಾಜ್ಯಗಳಲ್ಲಿ ನಡೆದ ವಿದ್ಯಾರ್ಥಿಗಳ ಕಲಿಕಾನಿರ್ಧರಣೆಯಿಂದ ಸಮಾನವಾದ ಸಾಮರ್ಥ್ಯವನ್ನೇ ಕುರಿತಿದ್ದಾಗಿರದಿದ್ದರೂ ಕಲಿಕಾನಿರ್ಧರಣೆಯಲ್ಲಿ ಒಳಗೊಂಡ ಕಲಿಕಾ ಕ್ಷೇತ್ರಗಳು ಸಮಾನವಿದ್ದದ್ದರಿಂದ ದೇಶದಾದ್ಯಂತದ ವಿಶ್ಲೇಷಣೆ ಸಾಧ್ಯವಾಯಿತು.

ದೇಶದೆಲ್ಲೆಡೆ "ಬರವಣಿಗೆ"ಯನ್ನು ಅತ್ಯಂತ ದುರ್ಬಲ ಕಲಿಕಾ ವಲಯವಾಗಿ ಗುರುತಿಸಲಾಯಿತು[3] ಭಾಷಾ ಕಲಿಕೆಯಲ್ಲಿ ಇನ್ನೊಂದು ಮುಖ್ಯ ದುರ್ಬಲ ಅಂಶವೆಂದು ಗುರುತಿಸಲ್ಪಟ್ಟಿದ್ದು-ವ್ಯಾಕರಣ. ಗ್ರಹಿಕೆಗೆ ಸಂಬಂಧಿಸಿದ ಅಂಶಗಳನ್ನು ಮೂರನೆಯದಾಗಿ ಗುರುತಿಸಲಾಗಿದ್ದು, ಸಾಮರ್ಥ್ಯ ಹೆಚ್ಚಳದಲ್ಲಿ ಮುಖ್ಯವಾಗುವ ಒಂದು ಬರಹದ "ಕೇಂದ್ರ ಭಾವವನ್ನು ಅರ್ಥ ಮಾಡಿಕೊಳ್ಳುವುದು ಅಥವಾ ಪದಗಳನ್ನು ಸೂಕ್ತವಾಗಿ ಬಳಸಿ ವಾಕ್ಯ ರಚಿಸುವುದು" ದುರ್ಬಲವಾಗಿರುವುದು ಕಂಡು ಬಂತು. ಹಾಗೆಯೇ "ಅಪರಿಚಿತ ಪದಗಳ ಉಕ್ತಲೇಖನ" ತೆಗೆದುಕೊಳ್ಳುವುದು, "ಚಿತ್ರಗಳ ಸರಣಿಯನ್ನು ಅರ್ಥಮಾಡಿಕೊಂಡು ಒಂದು ಕಥೆಯಾಗಿ ರೂಪಿಸುವುದು," "ಲೇಖನ ಚಿಹ್ನೆಗಳನ್ನು ಬಳಸಿ ಮಾರ್ಗದರ್ಶಿತ ಲೇಖನ ಬರೆಯುವುದು," "ವಾಕ್ಯರಚನೆಯ ಮೂಲ ನಿಯಮಗಳನ್ನು ತಿಳಿದಿರುವುದು" ಮತ್ತು ವಾಕ್ಯರಚನೆಯಲ್ಲಿ ಕಾಲವನ್ನು ಅರ್ಥಮಾಡಿಕೊಳ್ಳುವುದು" -ಈ ಸಾಮರ್ಥ್ಯಗಳೂ ದುರ್ಬಲವಾಗಿರುವುದು ಕಂಡು ಬಂದಿತು.

ಗಣಿತದಲ್ಲಿ, "ಭಿನ್ನರಾಶಿ, ದಶಮಾಂಶಗಳು, ಶೇಕಡಗಳ" ಕಲಿಕೆಯಲ್ಲಿ ಹಿಂದಿರುವುದು ಗೋಚರಿಸಿತು. "ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವುದು," ಹಣ, ಅಳತೆ, ಗಾತ್ರ, ಕ್ಷೇತ್ರ ಮತ್ತು ಪ್ರಮಾಣಗಳಿಗೆ" ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವಲ್ಲೂ ಹೆಚ್ಚಿನ ಸಾಮರ್ಥ್ಯ ಇಲ್ಲದಿರುವುದು ಕಂಡುಬಂತು. "ರೂಪಾಯಿಯನ್ನು ಪೈಸೆಗಳಿಗೆ ಪರಿವರ್ತಿಸುವುದು, ಹಣಕಾಸಿನ ಸಮಸ್ಯೆಗಳನ್ನು ಪರಿಹರಿಸುವುದು, ಅಳತೆಯ ಪ್ರಮಾಣಗಳ ಬಳಕೆ ಮತ್ತು "ಮಹತ್ತಮ ಸಾಮಾನ್ಯ ಅಪವರ್ತಕಗಳು ಮತ್ತು ಲಘುತ್ತಮ ಸಾಮಾನ್ಯ ಅಪವರ್ತಕಗಳನ್ನು" ಗುರುತಿಸುವುದರಲ್ಲಿ ಸಾಮರ್ಥ್ಯದ ಕೊರತೆ ಇರುವುದನ್ನು ಗುರುತಿಸಲಾಯಿತು.

ಪರಿಸರ ವಿಜ್ಞಾನ ಕ್ಷೇತ್ರದಲ್ಲಿ "ಭೂಮಿ ಮತ್ತು ಆಕಾಶದ ಸರಳ ವಿದ್ಯಮಾನಗಳನ್ನುಗಮನಿಸುವುದು ಮತ್ತು ನಿರ್ಣಯಗಳನ್ನು ತಿಳಿಸುವುದು", "ಮನುಷ್ಯ ಮತ್ತು ಪರಿಸರದ ನಡುವೆ ಇರುವ ಸ್ಥಳಸಂಬಂಧಿ ಸಮಸ್ಯೆ ಹಾಗೂ ಕೊಳ್ಕೊಡೆಯನ್ನು ಅರ್ಥ ಮಾಡಿಕೊಳ್ಳುವುದು ಮತ್ತು ವಿಶ್ಲೇಷಿಸುವುದು," "ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದಲ್ಲಿ ತನ್ನ ಸುಸ್ಥಿತಿ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ" ಸಂಬಂಧಿಸಿದ ವಿಷಯದಲ್ಲೂ ಕಲಿಕಾ ಸಾಮರ್ಥ್ಯ ಕಡಿಮೆ ಇದೆ ಎಂಬುದು ತಿಳಿಯಿತು. ಈ ವಿಷಯಗಳನ್ನು ಗಮನಿಸುವಾಗ ಕೆಲವು ನಿರ್ದಿಷ್ಟ ಅಂಶಗಳನ್ನು ಗುರುತಿಸಲಾಯಿತು. "ಭೂಪಟಗಳನ್ನು ಓದುವುದು ಮತ್ತು ದಿಕ್ಕುಗಳನ್ನು ಗುರುತಿಸುವುದು," "ತನ್ನ ಜಿಲ್ಲೆ, ರಾಜ್ಯ, ಇತ್ಯಾದಿಗಳನ್ನು ಭೂಪಟದ ಮೇಲೆ ಗುರುತಿಸುವುದು," ಆಯಾ ವಲಯದಲ್ಲಿರುವ ವಿವಿಧ ವೃತ್ತಿ ಗಳಂತಹ ತನ್ನ ನಿಕಟ ಪರಿಸರದ ಜ್ಞಾನದ ಬಗ್ಗೆ ತಿಳುವಳಿಕೆ", "ಸಾಮಾಜಿಕ-ಆರ್ಥಿಕ ಸ್ಥಿತಿಗಳ ಬಗ್ಗೆ ತಿಳುವಳಿಕೆ- ಅಂದರೆ ಸಣ್ಣ ಕುಟುಂಬಗಳ ಅಗತ್ಯಗಳು, ಸಣ್ಣ ಮನೆಗಳಲ್ಲಿ ವಾಸಿಸುತ್ತಿರುವ ದೊಡ್ಡ ಕುಟುಂಬದ ಕಷ್ಟಗಳು ಇತ್ಯಾದಿ".

ಕಲಿಕಾ ಖಾತರಿ ಕಾರ್ಯಕ್ರಮ ಜಾರಿಯಾದ ಐದು ರಾಜ್ಯಗಳಲ್ಲಿ ಕೆಲವು ಸಮಾನ ಸಂಗತಿಗಳಿದ್ದರೂ. ಬಹಳಷ್ಟು ವ್ಯತ್ಯಾಸಗಳೂ ಗೋಚರವಾದವು. ಈ ಒಂದೊಂದು ರಾಜ್ಯಕ್ಕೂ ನಿರ್ದಿಷ್ಟವಾದ ವ್ಯತ್ಯಾಸಗಳು ಕೂಡ ಆಳವಾದ ಒಳನೋಟಗಳನ್ನು ನೀಡುತ್ತವೆ. ಈ ಲೇಖನದ ಪದಮಿತಿಯನ್ನು ಗಮನದಲ್ಲಿರಿಸಿ ಸಮಾನವಾಗಿ ಕಂಡ ಅಂಶಗಳನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ.

ವಿಶಾಲ ಪರಿಧಿಯ ಕಲಿಕಾ ನಿರ್ಧರಣೆಯೂ ಅತ್ಯಗತ್ಯ ಮತ್ತು ಸೂಕ್ತ ರೀತಿಯಲ್ಲಿ ಪರಿಕಲ್ಪಿಸಿ ಅದನ್ನು ಬುದ್ಧಿವಂತಿಕೆಯಿಂದ ಜಾರಿಗೊಳಿಸಿದರೆ ಅದು ಅತಿ ಹೆಚ್ಚು ಲಾಭ ತರುವ ಒಳನೋಟಗಳನ್ನು ನೀಡುತ್ತದೆ ಎಂಬುದಕ್ಕೆ ಇದು ಸಾಕ್ಷಿ. ಇವು ನೀತಿ ರೂಪಿಸುವುದಕ್ಕೆ ಮಾತ್ರವಲ್ಲ ತರಗತಿಯ ಚಟುವಟಿಕೆಗಳ ಹಂತದಲ್ಲೂ ನೆರವಾಗುತ್ತದೆ. ಆಸ್ಟ್ರೇಲಿಯಾದ ಮೌಲ್ಯಾಂಕನ ಕ್ಷೇತ್ರದ ದೈತ್ಯ ACER (ಆಸ್ಟ್ರೇಲಿಯನ್ ಕೌನ್ಸಿಲ್ ಫಾರ್ ಎಜುಕೇಷನಲ್ ರೀಸರ್ಚ್), ಸಂಸ್ಥೆಯ ಮುಖ್ಯಸ್ಥ ಜೆಫ್ ಮಾಸ್ಟರ್ಸ್ ಅವರ ಮಾತಿನಂತೆ "21ನೇ ಶತಮಾನದ ಶಾಲಾ ಕಲಿಕಾನಿರ್ಧರಣೆಗಳು ಸುಧಾರಿತ ಕಲಿಕೆ ಮತ್ತು ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಕೊಡುಗೆ ನೀಡಲು ಸಾಧ್ಯವಾಗಬೇಕಾದರೆ, ನಾವು ಅನ್ವಯಿಸುವ ವಿಧಾನದಲ್ಲಿ ಬದಲಾವಣೆ ತರಬೇಕಾದ ಅಗತ್ಯವಿದೆ. ಯಾವುದೇ ಕಲಿಕೆಯ ಕ್ಷೇತ್ರದಲ್ಲಿ ಕಲಿಕೆಯುವವರು ದೀರ್ಘ ಅವಧಿಯಲ್ಲಿ ಕಲಿಯುವಾಗ ನಿರ್ಧರಣೆಯ ಸಮಯದಲ್ಲಿ ಯಾವ ಮಟ್ಟದಲ್ಲಿ ಇದ್ದಾರೆ ಎಂಬುದನ್ನು ಸ್ಥಾಪಿಸುವುದು ಮತ್ತು ಅರ್ಥಮಾಡಿಕೊಳ್ಳುವುದಕ್ಕಾಗಿ ಕಲಿಕಾನಿರ್ಧರಣೆಗಳು ವಿನ್ಯಾಸಗೊಳ್ಳಬೇಕು." ಹಾಗಾಗಿ ನಿರ್ವಾಹವಿಲ್ಲದೆ ವಿಶಾಲ ಪರಿಧಿಯಲ್ಲಿ ಆಗುವ ಎಲ್ಲಾ ಶಾಲಾ ಮಟ್ಟದ ವಿದ್ಯಾರ್ಥಿಗಳ ಕಲಿಕಾನಿರ್ಧರಣೆ ವಿಧಾನದಲ್ಲಿ ಒಂದಿಷ್ಟು ಬದಲಾವಣೆ ತಂದರೆ ಅದು ವಿವಿಧ ಹಂತಗಳಲ್ಲಿ ಉಪಯುಕ್ತವಾಗುತ್ತದೆ. ಕಲಿಕಾ ಖಾತರಿ ಕಾರ್ಯಕ್ರಮ ಈ ಅಂಶವನ್ನು ಯಶಸ್ವಿಯಾಗಿ ತೋರಿಸಿಕೊಟ್ಟಿದೆ.



ಅಕ್ಕರೆಯ ಬಾಯಿಮಾತಿನ ಪರೀಕ್ಷೆ.

ಖುಷಿ ಖುಷಿಯ ಕಲಿಕಾ ನಿರ್ಧರಣೆ

ಲೆಕ್ಕದ ಬೆರಳೆಣಿಕೆಯ ವಿಧಾನ ಮತ್ತು ಪ್ರಶ್ನೆ ಪತ್ರಿಕೆಯಲ್ಲಿ ಹಸನ್ಮುಖ.

ಕಲಿಕಾನಿರ್ಧರಣೆಯ ಸಂಭ್ರಮ.

ಪರೀಕ್ಷೆ ಸನ್ನಿಹಿತವಿದ್ದರೂ ನಗೆಯ ಬೆಳ್ದಿಂಗಳು.

[1]ನವೆಂಬರ್ 2002ರಲ್ಲಿ ಕರ್ನಾಟಕದಲ್ಲಿ ಕಲಿಕಾ ಖಾತರಿ ಕಾರ್ಯಕ್ರಮವನ್ನು ಅಜೀಂ ಪ್ರೇಂಜಿ ಪ್ರತಿಷ್ಠಾನದ ಮುಖ್ಯ ಕಾರ್ಯಕ್ರಮವಾಗಿ ಚಾಲನೆ ನೀಡಲಾಯಿತು. ನಂತರ ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ಉತ್ತರಾಖಂಡ ರಾಜ್ಯಗಳಿಗೆ 2 ವರ್ಷಗಳ ಅವಧಿಯಲ್ಲಿ ವಿಸ್ತರಿಸಿತು.

[2]ಕಲಿಕಾ ಖಾತರಿ ಕಾರ್ಯಕ್ರಮದ ಕಲಿಕಾ ನಿರ್ಧರಣೆ ಪ್ರಾಥಮಿಕ ತರಗತಿಗಳಿಗೆ ಹೆಚ್ಚು ಒತ್ತು ನೀಡಿತು. ಶೈಕ್ಷಣಿಕ ಅಂಶಗಳ ವಿಶ್ಲೇಷಣೆಯು 3 ಮತ್ತು 4ನೇ ತರಗತಿಗಳನ್ನು ಆಧರಿಸಿದ್ದು. 3 ಮೂರನೇ ಒಂದು ಭಾಗದಷ್ಟು ವಿದ್ಯಾರ್ಥಿಗಳು ಒಂದು ವಿಷಯ ಅಥವಾ ಕೌಶಲ್ಯದಲ್ಲಿ ಸಾಮರ್ಥ್ಯ ಪರೀಕ್ಷೆಯಲ್ಲಿ ಎಲ್ಲ ರಾಜ್ಯಗಳಲ್ಲೂ ನಿರ್ಧರಿತ ಸಾಧನೆ ಮಾಡದಿದ್ದಲ್ಲಿ ದುರ್ಬಲ ಎಂದು ಗುರುತಿಸಲಾಗುತ್ತದೆ.

**ಉಲ್ಲೇಖಗಳು:**

1. ಕಲಿಕಾ ಖಾತರಿ ಕಾರ್ಯಕ್ರಮದ ಪರಿಕಲ್ಪನೆ ಟಿಪ್ಪಣಿ 2002, ಅಜೀಂ ಪ್ರೇಂಜಿ ಪ್ರತಿಷ್ಠಾನ
2. ಕಲಿಕಾ ಖಾತರಿ ಕಾರ್ಯಕ್ರಮದ ಪರಿಕಲ್ಪನೆ ಟಿಪ್ಪಣಿ 2002, ಅಜೀಂ ಪ್ರೇಂಜಿ ಪ್ರತಿಷ್ಠಾನ ಇತಿಹಾಸ ಪ್ರತಿಷ್ಠಾನ- ಸಾರಾಂಶ, ಅಜೀಂ ಪ್ರೇಂಜಿ ಪ್ರತಿಷ್ಠಾನದ
3. ಐದು ರಾಜ್ಯಗಳಲ್ಲಿ ಕಲಿಕಾ ಖಾತ್ರಿ ಕಾರ್ಯಕ್ರಮದ ತುಲನಾತ್ಮಕ ಅಧ್ಯಯನ- ಸಾರಾಂಶ ವರದಿ, ಅಜೀಂ ಪ್ರೇಂಜಿ ಪ್ರತಿಷ್ಠಾನ
4. ಹೌ ಕ್ಲಾಸ್ ರೂಮ್ ಅಸೆಸ್‌ಮೆಂಟ್ ಇಂಪ್ರೋವ್ ಲರ್ನಿಂಗ್//ಥಾಮಸ್ ಆರ್ ಗುಸ್ಕೆ;//ಎಜುಕೇಷನ್ ಲೀಡರ್‌ಶಿಪ್ ।ಫೆಬ್ರವರಿ 2003। ಸಂಪುಟ 60। ನಂಬರ್ 5। ವಿದ್ಯಾರ್ಥಿಗಳ ಸುಧಾರಣಾ ಸಾಧನೆಯ ಅಂಕಿ ಅಂಶಗಳ ಬಳಕೆ। ಪುಟ 6-11
5. ಮೆಜರಿಂಗ್ ಪ್ರೋಗ್ರೆಸ್, ಝೆಫ್ ಮಾಸ್ಟರ್ಸ್, 30 ಮೇ 2013, ಆಸ್ಟ್ರೇಲಿಯನ್ ಎಜುಕೇಷನ್ ರಿವ್ಯೂ ನಂಬರ್ 57, ರೀಫಾರ್ಮಿಂಗ್ ಎಜುಕೇಷನಲ್ ಅಸೆಸ್‌ಮೆಂಟ್: ಇಂಪರೇಟಿವ್, ಪ್ರಿನ್ಸಿಪಲ್ಸ್, ಅಂಡ್ ಚಾಲೆಂಜಸ್.(ಎಸಿಇಆರ್ ಪ್ರೆಸ್ 2013)

***ರಿಷಿಕೇಶ್ ಬಿ.ಎಸ್.:*** *ಇವರು ಪ್ರಸ್ತುತ ಅಜೀಂ ಪ್ರೇಂಜೀ ಪ್ರತಿಷ್ಠಾನದಲ್ಲಿ ಇನ್ಸ್ಟಿಟ್ಯೂಟ್ ಫಾರ್ ಅಸೆಸ್ಮೆಂಟ್ ಅಂಡ್ ಅಕ್ರಡಿಷನ್ ವಿಭಾಗದಲ್ಲಿ ಕೆಲಸಮಾಡುತ್ತಿದ್ದಾರೆ. ಕಳೆದಹತ್ತು ವರ್ಷಗಳಿಂದ ಅವರು ಶೈಕ್ಷಣಿಕ ಸಂಶೋಧನೆ, ಶಿಕ್ಷಕ ತರಬೇತಿ, ಸಾಂಸ್ಥಿಕ ಕಲಿಕಾ ನಿರ್ಧರಣೆಯನ್ನು ಬೋಧಿಸಿದ್ದಾರೆ ಮತ್ತು ವಿನ್ಯಾಸಗೊಳಿಸಿದ್ದಾರೆ. ಅದರಲ್ಲಿ 8 ವರ್ಷಗಳ ಕಾಲ ಅಜೀಂ ಪ್ರೇಂಜೀ ಪ್ರತಿಷ್ಠಾನದಲ್ಲಿ ಕೆಲಸ ಮಾಡಿದ್ದಾರೆ. ದೆಹಲಿಯ ಜವಾಹರಲಾಲ್ ನೆಹರೂ ವಿವಿ.ಯಿಂದ ಭಾರತೀಯ ಚರಿತ್ರೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ, ಬೆಂಗಳೂರಿನಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಶೈಕ್ಷಣಿಕ ಯೋಜನೆಯಲ್ಲಿ ಕೆಲಸ ಮಾಡಿದರು. ಈ ಅವಧಿಯಲ್ಲಿ ಬೆಂಗಳೂರಿನ ಆಸುಪಾಸಿನ ನೂರಕ್ಕೂ ಹೆಚ್ಚಿನ ಶಾಲೆಗಳ ಮಕ್ಕಳೊಂದಿಗೆ ಕೆಲಸ ಮಾಡಿದ್ದಾರೆ. ಇವರನ್ನು* rishikesh@azimpremjifoundation.org *ನಲ್ಲಿ ಸಂಪರ್ಕಿಸಬಹುದು.*